## ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.

ಪಿಡಬ್ಲ್ಯೂಃ

ಎಸ್.ಸಿ. ಸಂಖ್ಯೆಃ ಸಿಡಬ್ಲ್ಯೂಃ

ಸಾಕ್ಷಿದಾರರ ಹೆಸರು ಃ
ತಂದೆ ಹೆಸರು ಃ
ವಯಸ್ಸು ಃ
ವೃತ್ತಿ ಃ
ವಾಸ ಃ

**ದಿನಾಂಕಃ 06-08-2021** ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದ**

ನಾನು ಪೊಲೀಸ್ ಠಾಣೆಯಲ್ಲಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

(ಸಾಕ್ಷಿಯು ಸಂಪೂರ್ಣ ಪ್ರತಿಕೂಲ ಸಾಕ್ಷಿಯಾದ ಕಾರಣ ಆತನನ್ನು ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿಯನ್ನು ಕೋರಿರುತ್ತಾರೆ. ಆ ಬಗ್ಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ** ಸರ್ಕಾರಿ ಅಭಿಯೋಜಕರಿಂದ

**ಎಸ್.ಸಿ. ಸಂಖ್ಯೆ: 10-2019**
**ಪಿಡಬ್ಲ್ಯೂ: 2**
**ಸಿಡಬ್ಲ್ಯೂ: 3**

**<u>ದಿನಾಂಕ: 06-08-2021</u> ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**<u>ಪಾಟೀ ಸವಾಲು:</u> ಆರೋಪಿ ಪರ ಶ್ರೀ ಎಂ.ಎಸ್.ಎಸ್. ವಕೀಲರಿಂದ**

ನನ್ನ ಗಂಡನಿಗೆ ಕೊಟ್ಟ ಹಣ ನನ್ನ ಹತ್ತಿರ 2 – 3 ದಿನಗಳ ಹಿಂದೆಯೇ ಇತ್ತು. ನನ್ನ ಹತ್ತಿರ ಒಟ್ಟು ರೂ.12,000/- ಇತ್ತು. ಈ 12,000/- ಹಣ ಗ್ರಾಮೀಣ ಕೂಟದ ಸಂಘದ ಸದಸ್ಯರು ನನ್ನ ಹತ್ತಿರ ಕೊಟ್ಟ ಹಣ ಹಾಗೂ ನನ್ನ ಹಣ ಸೇರಿತ್ತು. ಅದನ್ನು ನಾನು ಸಂಘಕ್ಕೆ ಕಟ್ಟಬೇಕಾಗಿತ್ತು. 5 ಜನ ಸದಸ್ಯರು ಸೇರಿ ನನ್ನ ಹತ್ತಿರ 10,000/- ಹಣ ಕೊಟ್ಟಿದ್ದರು. ಗ್ರಾಮೀಣ ಕೂಟದ ಸಂಘದ ಸದಸ್ಯರಿಂದ ಪ್ರಕಾಶ್ ಎನ್ನುವವರು ಹಣವನ್ನು ಸಂಗ್ರಹಿಸುವ ಕೆಲಸ ಮಾಡುತ್ತಾರೆ. ಐದೂ ಜನ ಸದಸ್ಯರು ಸಂಘದಿಂದ ಪಡೆದುಕೊಂಡಿದ್ದ ಸಾಲದ ಹಣದ ಮರುಪಾವತಿಗಾಗಿ ನನ್ನ ಹತ್ತಿರ ಕೊಟ್ಟಿದ್ದರು. ನಾನು ಸಂಘದಿಂದ 25,000/- ಹಣವನ್ನು 6 ತಿಂಗಳ ಹಿಂದೆಯೇ ಪಡೆದುಕೊಂಡಿದ್ದೆನು. ನಾನು ಈ 25,000/- ಸಾಲದ ಹಣವನ್ನು ತೀರಿಸಿರುತ್ತೇನೆ. ನನ್ನ ಗಂಡ ನನ್ನ ಹತ್ತಿರ ಹಣ ಕೊಡುವಂತೆ ಕೇಳುವ ಎಷ್ಟು ದಿನ ಮೊದಲು ಈ ಸಾಲವನ್ನು ತೀರಿಸಿದ್ದೇನೆ ಎಂದು ಹೇಳಲು ಆಗುವುದಿಲ್ಲ. ಸದಸ್ಯರು ಕೊಟ್ಟಿದ್ದ 10,000/- ಹಣವನ್ನು ದಿನಾಂಕ 02-03-2019 ರಂದು ಸಂಘಕ್ಕೆ ಕೊಟ್ಟಿದ್ದೇನೆ. ನನ್ನ ಗಂಡ ಹಣ ಕೊಡುವಂತೆ ನನಗೆ ಕೇಳಿಲ್ಲ ಮತ್ತು ನಾನು ಅವನಿಗೆ ಹಣ ಕೊಟ್ಟಿಲ್ಲ ಎಂದು ಹೇಳುವುದು ಸರಿ ಅಲ್ಲ.

ಈ ಕೇಸ್‌ಗೆ ಸಂಬಂಧಿಸಿದಂತೆ ನಾನು ಪೊಲೀಸ್ ಠಾಣೆಗೆ ಹೋಗಿಲ್ಲ. ಈ ಕೇಸ್‌ಗೆ ಸಂಬಂಧಿಸಿದಂತೆ ಮೊದಲ ಬಾರಿಗೆ ಪೊಲೀಸರನ್ನು ಬ್ಯಾಂಕ್‌ನಲ್ಲಿ ನೋಡಿದ್ದೇನೆ. ಇದಾದ ನಂತರ ನಾನು ಪೊಲೀಸರನ್ನು ಭೇಟಿಯಾಗಿಲ್ಲ. ಆರೋಪಿಯನ್ನು ಮೊದಲು ನಾನು ನೋಡಿಲ್ಲ ಅವನನ್ನು ಮೊದಲ ಬಾರಿಗೆ ಬ್ಯಾಂಕ್‌ನಲ್ಲಿ ನೋಡಿದ್ದೇನೆ. ಪೊಲೀಸರು ಬ್ಯಾಂಕ್‌ನಲ್ಲಿ ಬರವಣಿಗೆ ಮಾಡಿದ್ದಾರೆ ಎಷ್ಟು ಪುಟಗಳ ಬರವಣಿಗೆ ಮಾಡಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಪೊಲೀಸರು ನನ್ನನ್ನು ಕೇಳಿದ್ದು ನಾನು ಹೇಳಿರುವುದನ್ನು

**ಎಸ್.ಸಿ. ಸಂಖ್ಯೆ: 10-2019**
**ಪಿಡಬ್ಲ್ಯೂ: 2**
**ಸಿಡಬ್ಲ್ಯೂ: 3**

ಅವರು ಬರೆದುಕೊಂಡಿದ್ದಾರೆ. ಪೊಲೀಸರು ಚಿನ್ನವನ್ನು ಪಡೆದುಕೊಂಡಾಗ ನನ್ನ ಸಹಿಯನ್ನು ಪಡೆದಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ಎಷ್ಟು ಜನರ ಸಹಿ ಪಡೆದುಕೊಂಡಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಅಲ್ಲಿ ಇದ್ದ ಪೊಲೀಸರಲ್ಲಿ ಯಾರೋ ಒಬ್ಬರು ಬರೆದಿರುತ್ತಾರೆ. ನಾನು ಬ್ಯಾಂಕ್‌ನಲ್ಲಿ ಅರ್ಧ ಗಂಟೆಯಿಂದ ಮುಕ್ಕಾಲು ಗಂಟೆಯವರೆಗೆ ಇದ್ದೆ. ಅಲ್ಲಿಂದ ಮನೆಗೆ ಹೋಗಿರುತ್ತೇನೆ. ನ್ಯಾಯಾಲಯದಲ್ಲಿ ಪೊಲೀಸರ ಮಾಹಿತಿಯಂತೆ ನಾನು ನನ್ನ ಹೇಳಿಕೆಯನ್ನು ನೀಡಿದ್ದೇನೆ ಎನ್ನುವುದು ಸರಿ ಅಲ್ಲ. ನನ್ನ ಗಂಡ ನನ್ನ ಹತ್ತಿರ ಹಣ ಕೇಳುವುದಕ್ಕಿಂತ ಮೊದಲೇ ಆರೋಪಿಯ ಹೆಸರು ರವಿರಾಜ ಎಂದು ಹೇಳಿದ್ದನು. ಆರೋಪಿಯ ಹೆಂಡತಿ, ಮಕ್ಕಳ ಬಗ್ಗೆ ತಿಳಿಸಿರುತ್ತಾನೆ ಆದರೆ ಅವರು ಎಲ್ಲಿ ವಾಸಿಸುತ್ತಾರೆ ಎನ್ನುವ ಬಗ್ಗೆ ನನ್ನ ಗಂಡ ನನಗೆ ಹೇಳಿಲ್ಲ. ಆರೋಪಿಯನ್ನು ಮೊದಲ ಬಾರಿಗೆ ನಾನು ಪೊಲೀಸ್ ಠಾಣೆಯಲ್ಲಿ ನೋಡಿದ್ದೇನೆ ಎಂದು ಹೇಳುವುದು ಸರಿ ಅಲ್ಲ. ಆರೋಪಿ ಹಣ ಪಡೆದುಕೊಳ್ಳುವುದಕ್ಕಾಗಿ ಅಂಪಾರು ಬಸ್ ನಿಲ್ದಾಣದ ಹತ್ತಿರ ಬಂದಾಗ ನೋಡಿದ್ದೇನೆ. ಹೊಸಂಗಡಿ ಗ್ರಾಮದಲ್ಲಿ ಬ್ಯಾಂಕ್ ಮತ್ತು ಸೊಸೈಟಿಗಳು ಇವೆ. ಮು.ಮಾ-1 ರ ಚಿನ್ನದ ಸರ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎನ್ನುವುದು ಸರಿ ಅಲ್ಲ. ನನ್ನ ಗಂಡ ಮತ್ತು ಪೊಲೀಸರ ಮಾತನ್ನು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ.

**ಮರು ವಿಚಾರಣೆ:** ಇಲ್ಲ.

**(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾ.**
**ಕುಂದಾಪುರ**